## 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

## C.C. No. 2583/2023

**CW- 12** **PW:8**

| | |
|---|---|
| ಸಾಕ್ಷಿಯ ಹೆಸರು | ಃ ಪ್ರದೀಪಕುಮಾರ ಮಾವಿನಮರದ |
| ತಂದೆ /ಗಂಡನ ಹೆಸರು | ಃ ರಾಮಚಂದ್ರ |
| ವಯಸ್ಸು | ಃ 33 ವರ್ಷ |
| ಉದ್ಯೋಗ | ಃ ಇಂಡೊಸ್ಟಾರ್ ಫೆನಾನ್ಸ ಲಿಮಿಟೆಡ್ ಸಿನಿಯರ್ ಕಲೆಕ್ಷನ್ ಆಫಿಸರ್ |
| ವಾಸಸ್ಥಳ | ಃ ವೀರಾಪುರ ಓಣಿ, ಹುಬ್ಬಳ್ಳಿ |

ದಿಃ **16.12.2024.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ**

ಸಾಕ್ಷಿಗೆ ನಿಪಿ.5 ದಾಖಲೆ ತೋರಿಸಲಾಗಿ ಅದರಲ್ಲಿ ತನ್ನ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.5(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿಃ 16.02.2023 ರಂದು ನವನಗರ ಪೊಲಿಸ್ ಠಾಣೆಯಲ್ಲಿ ಸಂಜೆ 6.30 ಯಿಂದ 7.30 ಗಂಟೆಯ ಅವಧಿಯಲ್ಲಿ ಮಾಡಿರುತ್ತೇನೆ. ನಾನು ಹಾಗೂ ಬಲರಾಮಸಿಂಗ್ ಸೇರಿ ಪೊಲಿಸರಿಗೆ ದಾಖಲೆ ನೀಡಿರುತ್ತೇವೆ ಸದರಿ ಸಮಯದಂದು ನಿಪಿ.5 ಮಹಜರ ಜರುಗಿಸಿರುತ್ತಾರೆ. ನಿಪಿ.5 ರಲ್ಲಿ ತೊರಿಸಲಾದ 1) ಬಸವರಾಜ ದೇವಗಿರಿ ಈತನು ದಿಃ 10.05.2019 ರಂದು ಲೋನ ಪಡೆಯಲು ಫೈನಾನ್ಸ ಕಂಪನಿಗೆ ಸಲ್ಲಿಸಿಕೊಂಡ ಅರ್ಜಿಯ ಮೂಲ ಪ್ರತಿ 2) ಬಸವರಾಜ ದೇವಗಿರಿ ಈತನು ದಿಃ 17.10.2019 ರಂದು ಲೋನ ಪಡೆಯಲು ಫೈನಾನ್ಸ ಕಂಪನಿಗೆ ಸಲ್ಲಿಸಿಕೊಂಡ ಅರ್ಜಿಯ ಮೂಲ ಪ್ರತಿ 3) ಫಿರ್ಯಾದಿದಾರರು ಇಂಡೊಸ್ಟಾರ ಕ್ಯಾಪಿಟಲ್ ಫೈನಾನ್ಸ ಲಿ. ನಲ್ಲಿ ನೇಮಕಾತಿ ಹೊಂದಿದ ನೇಮಕಾತಿ ಪತ್ರದ ಮೂಲ ಪ್ರತಿ 4) ಮೂರು ಪುಟಗಳುಳ್ಳ ಲೋನ ಕ್ಲೊಸರ್ (ಮುಕ್ತಾಯದ) ಸ್ಟೇಟಮೆಂಟ ಪ್ರತಿಗಳು 5) 13 ಪುಟಗಳುಳ್ಳ ಲೋನ್ ಸ್ಟೇಟಮೆಂಟ ಮೂಲ ಪ್ರತಿಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಅವುಗಳು ನಿಪಿ.7 ರಿಂದ 9 ಎಂದು ಗುರುತಿಸಿರುತ್ತದೆ. ಈ ಹಂತದಲ್ಲಿ ನಿಪಿ.8 ನ್ನು ಗಮನಿಸಿದಾಗ ಸ್ಟೇಟಮೆಂಟ ಆಫ್ ಅಕೌಂಟ ಹಾಗೂ 1 ಲೋನ್ ಅಪ್ಲಿಕೆಷನ್ ಫಾರ್ಮಗೆ ನಿಪಿ.8 ಎಂದು ಸಂಖ್ಯೆ ನೀಡಲಾಗಿದ್ದು ಸಾಕ್ಷಿ ಸದರಿ ದಾಖಲೆಗಳನ್ನು ನೋಡಿ ಗುರುತಿಸುತ್ತಾರೆ. ಸದರಿ ಸಮಯದಲ್ಲಿ ನನ್ನ ಜೊತೆ ಚಾಸಾಃ 13 ಸಹ ನಿಪಿ.5 ದಾಖಲೆಗೆ ಸಹಿ ಮಾಡಿರುತ್ತಾರೆ. ಸದರಿ ಸಮಯದಲ್ಲಿ ನಿಪಿ.6 ಸಹ ಪೊಟೊ ತೆಗೆದಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎ.ಪಿ.ಪಿ. ಯವರಿಂದಃ**

ಈ ಮೇಲೆ ಹೇಳಿದ ದಾಖಲೆಗಳನ್ನು ಚಾಸಾಃ 1 ಪೊಲಿಸರ ಸಮಕ್ಷಮ ಹಾಜರುಪಡಿಸಿರುತ್ತಾರೆ ಎಂದರೆ ಸರಿ.

**ಪಾಟಿಸವಾಲುಃ ಆರೋಪಿ ನಂ.1 ಪರ ಶ್ರಿ ಸಿ ಸಿ ವಾಯ್ ವಕೀಲರಿಂದಃ**

ಚಾಸಾಃ 1 ಪೊಲಿಸರಿಗೆ ನೀಡಿದ ದಾಖಲೆಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತು. ಸದರಿ ದಾಖಲೆಗಳನ್ನು ಬ್ರಾಂಚ್ ಮ್ಯಾನೇಜರ್ ಶ್ರೀನಿವಾಸ ಕಟಾರೆ ಎಂಬುವರು ಪೊಲಿಸ್ ಠಾಣೆಯವರಿಗೆ ನೀಡಿರುತ್ತಾರೆ. ಮೇಲೆ ಹೇಳಿದ ದಾಖಲೆಗಳು ನಮ್ಮ ಸಂಸ್ಥೆಗೆ ಸೇರಿದವು ಎಂದು ನಾನು ಗುರುತಿಸಿರುತ್ತೇನೆ.

**ಪಾಟಿಸವಾಲುಃ ಆರೋಪಿ ನಂ.2 ಪರ ವಕೀಲರಿಂದಃ**

ಚಾಸಾಃ 1 ನನ್ನ ಮೇಲಾಧಿಕಾರಿ ಎಂದರೆ ಸರಿ. ಪಂಚನಾಮೆಗೆ ಬಾ ಎಂದು ಹೇಳಿ ಪೊಲಿಸರು ನನಗೆ ನೊಟಿಸ ನೀಡಿರಲಿಲ್ಲ. ಚಾಸಾಃ 1 ನನ್ನನ್ನು ಪೊಲಿಸ್ ಠಾಣೆಗೆ ಕರೆದುಕೊಂಡು ಹೋಗಿದ್ದರು. ಆ ದಿನ ಆರೊಪಿ ನಂ.1 ಇವರಿಗೆ ಸಂಬಂದಪಟ್ಟ ಲೋನ್ ಕ್ಲೋಸರ್ ಸೆಟಲ್ ಮೆಂಟ್ ಪ್ರತಿ ಹಾಗೂ ಲೋನ್ ಸೆಟಲ್ ಮೆಂಟ ಮೂಲ ಪ್ರತಿಗಳನ್ನು ನಾನು ನೋಡಲಿಲ್ಲ. ನಾವು ಆ ದಿನ ಠಾಣೆಗೆ ಹೋದಾಗ ಸಂಜೆ 6.00 ಗಂಟೆ ಆಗಿತ್ತು. ನಾವು ಠಾಣೆಗೆ ಹೋದಾಗ ಅಲ್ಲಿ ಸಬ್ ಇನ್ಸಪೇಕ್ಟರ ಇದ್ದರು ಆದರೆ ನಾವು ಗಬ್ಬೂರ ಇವರಿಗೆ ಬೇಟಿ ಆಗಿರುತ್ತೇವೆ. ನಾನು ನಿಪಿ.5 ಪಂಚನಾಮೆಯನ್ನು ಹೇಳಿ ಬರೆಯಿಸಿಲ್ಲ. ಅದನ್ನು ಗಬ್ಬೂರ ಪೊಲಿಸರೇ ತಯಾರಿಸಿರುತ್ತಾರೆ. ನವನಗರ ಠಾಣೆಯಲ್ಲಿ ನಾನು ಸುಮಾರು ಒಂದೂವರೆ ಗಂಟೆ ಇದ್ದೆನು. ಪೊಟೊಗಳನ್ನು ಯಾರು ತೆಗೆದರು ಎಂದು ನನಗೆ ಹೆಳಲು ಬರುವುದಿಲ್ಲ. ನಿಪಿ.5 ಪಂಚನಾಮೆಗೆ ಎಷ್ಟು ಜನ ಸಹಿ ಮಾಡಿದರು ಎಂದು ನನಗೆ ಸ್ವಂತಕ್ಕೆ ಮಾಹಿತಿ ಇಲ್ಲ. ಚಾಸಾಃ 13 ಇವರು ನಮ್ಮ ಏರಿಯಾ ಸೇಲ್ಸ ಮ್ಯಾನೇಜರ್ ಆಗಿದ್ದರು. ಅವರನ್ನು ಚಾಸಾಃ 1 ಕರೆದುಕೊಂಡು ಹೋಗಿದ್ದರು. ನಿಪಿ.5 ದಾಖಲೆಯನ್ನು ನಾನು ಓದಿ ನೋಡಿಲ್ಲ. ಏನು ದಾಖಲೆಗಳು ಇದ್ದವು ಎಂದರೆ ನನಗೆ ಸ್ವಂತಕ್ಕೆ ಮಾಹಿತಿ ಇಲ್ಲ ಆದರೆ ಮೇಲ್ನೋಟಕ್ಕೆ ಮಾತ್ರ ಗೊತ್ತು. ನಿಪಿ.5 ರ ಪ್ರಕಾರ ಸಂಜೆ 5.30 ಗಂಟೆಯಿಂದ 6.30 ಗಂಟೆಯವರೆಗೆ ಪಂಚನಾಮೆ ಜರುಗಿಸಿರುತ್ತಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ದಿನ ಚಾಸಾಃ 1 ಪೊಲಿಸರ ಹತ್ತಿರ ಯಾವದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**(**ಶ್ರೀಮತಿ ದೀಪಾ ಜಿ ಮನೇರಕರ**)**

**3** ನೇ ಅಧಿಕ ಹಿ**.**ದಿ**.**ನ್ಯಾ**.**ಹುಬ್ಬಳ್ಳಿ**.**